# ಪ್ರೇಮಕ್ಕೆ ಕೌನ್ಸಿಲಿಂಗ್ ಬೇಕೆ?



ಪ್ರೇಮ ವಿವಾಹ ಎಂದರೇನು? 'ವಿವಾಹವಾಗುವವರೆಗೆ ಪ್ರೇಮಿಸೋದು' ಎನ್ನುವ ತಮಾಷೆಯ ವ್ಯಾಖ್ಯಾನವಿದೆ. ಮದುವೆಯ ನಂತರ ಪ್ರೇಮ ಕ್ಷೀಣಿಸುತ್ತಾ ಹೋಗುತ್ತದೆ ಎನ್ನುವವರೂ ಇದ್ದಾರೆ. ಬಹುಶಃ ಬರೀ ದೈಹಿಕ ಆಕರ್ಷಣೆಯನ್ನೇ ಪ್ರೇಮವೆಂದು ತಪ್ಪಾಗಿ ತಿಳಿದಿರುವುದೂ ಇದಕ್ಕೆ ಕಾರಣವಿರಬಹುದು.

ಹೆಚ್ಚಿನ ಹುಡುಗ ಹುಡುಗಿಯರು ಈ ಆಕರ್ಷಣೆಯ ವಿವಿಧ ಹಂತದ ಮೂಲಕವೇ ಹಾದು ಹೋಗಿರುತ್ತಾರೆ. ಮೊದಲು ಪರಿಚಯ, ನಂತರ ಸ್ನೇಹ, ಸ್ನೇಹ ಬೆಳೆದಾಗ ಪರಸ್ಪರ ಮೆಚ್ಚುಗೆ; ಮಿತ್ರನಲ್ಲಿ – ಗೆಳತಿಯಲ್ಲಿ ಏನೋ ಒಂದು ಗುಣವನ್ನು ಇಷ್ಟಪಡುವುದು. ಹಾಗೂ ಪದೇ ಪದೇ ಅತ್ತ ಆಕರ್ಷಣೆ ಹೊಂದುವುದು– ಇದೇ ಇನ್‌ಫ್ಯಾಚುಯೇಶನ್.

ಇದೇನು ಅಪಾಯಕಾರಿ ಸ್ಥಿತಿಯಲ್ಲ. ಆದರೆ ಇಲ್ಲಿ ವಿವೇಚನೆ ಅಗತ್ಯ. ಕೇವಲ ಆಕರ್ಷಣೆಗೆ ಪ್ರೇಮದ ಪಟ್ಟ ಕಟ್ಟುವ ಹುಡುಗ-ಹುಡುಗಿಯರೇ ಹೆಚ್ಚು. ಆ ವಯಸ್ಸೇ ಅಂತಹದ್ದು. ಇಂತಹ ಆಕರ್ಷಣೆಯಲ್ಲಿ ನೀವು ಮೆಚ್ಚುವ ವ್ಯಕ್ತಿ ನಿಮ್ಮಿಂದ ದೂರವಾದಾಗ ಮೊದ ಮೊದಲು ಕಷ್ಟವಾದರೂ ನಂತರ ಆಕರ್ಷಣೆಯೂ ದೂರವಾಗುತ್ತದೆ. ನಂತರ ಮರೆತು ಬಿಡುತ್ತೀರಿ.

ಆದರೆ ಪ್ರೇಮ ಹಾಗಲ್ಲ. ಅಲ್ಲಿ ನೀವು ಪ್ರೇಮಿಸುವ ವ್ಯಕ್ತಿ ಬಿಟ್ಟುಹೋದ ಅನುಭವ ನಿಮ್ಮನ್ನು ಕಾಡುತ್ತಿರುತ್ತದೆ. ಆ ವ್ಯಕ್ತಿ ಈ ಲೋಕದಲ್ಲಿರದಿದ್ದರೂ ಪ್ರೇಮವಿದ್ದೇ ಇರುತ್ತದೆ. ಆದ್ದರಿಂದ ಪ್ರೇಮಕ್ಕೂ, ವಿವಾಹಕ್ಕೂ ಎಂತಹ ಸಂಬಂಧ ಎನ್ನುವರ ಜೊತೆ ಪ್ರೇಮಕ್ಕೆ, ವಿವಾಹಕ್ಕೆ ಹತ್ತಿರದ ನಂಟು ಕಲ್ಪಿಸುವ ಸಂಪ್ರದಾಯಸ್ಥರಿದ್ದಾರೆ.

ನಮ್ಮಲ್ಲಿ ವಿವಾಹದ ನಂತರ ತನ್ನ ಪಾಲಿಗೆ ದೊರೆತ ಸಂಗಾತಿಯನ್ನು ಪ್ರೀತಿಸಲು ಆರಂಭಿಸುವವರೇ ಹೆಚ್ಚು. ಈ ಪ್ರೀತಿಯೇ ಹೆಚ್ಚು ಬಾಳುವಂತದ್ದು. ಏಕೆಂದರೆ ಇಲ್ಲಿ ಬರೀ ಆಕರ್ಷಣೆ ಇರೋದಿಲ್ಲ. ಬಾಂಧವ್ಯವಿರುತ್ತದೆ. ಕಡೆಗಣಿಸಲಾಗದ ಸಮಾಜದ ಕಟ್ಟುಪಾಡಿರುತ್ತದೆ. ಬಾಂಧವ್ಯದ ಉದ್ದೇಶ ಕುಟುಂಬವನ್ನು ಬೆಳೆಸುವುದರ ಜೊತೆಗೆ ಸಂಸ್ಕೃತಿಯನ್ನು ಉಳಿಸುವುದು.

ಹಾಗೆಂದು ಕಾಲ ಬದಲಾಗುತ್ತಲೇ ಇದೆ. ಇತ್ತೀಚೆಗೆ ಯುವಜನರಲ್ಲಿ ಪ್ರೇಮವಿವಾಹದ ಹುಚ್ಚು ಹೆಚ್ಚಿದೆ. ಆದರೆ ಅರ್ಧಕ್ಕರ್ಧ ಯುವಜನರಿಗೆ ಪ್ರೇಮದ ಸರಿಯಾದ ವ್ಯಾಖ್ಯಾನ ಗೊತ್ತಿಲ್ಲ. ನೂರಾರು ಹುಡುಗಿಯರು ತಮ್ಮ ಪ್ರೀತಿಯ ಆಕರ್ಷಣೆಯಿಂದ ಹೊರ ಬರಲಾಗದೆ ಮನೆಯವರು ಆಯೋಜಿಸಿದ ಸಂಬಂಧದಲ್ಲಿಯೇ ಅತೃಪ್ತ ಜೀವನ ಸಾಗಿಸುತ್ತಾರೆ. ಇದಕ್ಕೆ ಕಾರಣ ಪ್ರೇಮ ಹಾಗೂ ಆಕರ್ಷಣೆಯ ನಡುವಿನ ವ್ಯತ್ಯಾಸ ಗುರುತಿಸುವ ವಿವೇಚನೆ ಇಲ್ಲದಿರುವುದು.

ವಿವಾಹವಂತೂ ಜೀವನದ ಗಂಭೀರ ತೀರ್ಮಾನ. ಇಲ್ಲಿ ಬರೀ ಆಕರ್ಷಣೆಯಿದ್ದರೆ ಸಾಲದು. ವಾಸ್ತವದ ಅರಿವೂ ಇರಬೇಕು. ಭವಿಷ್ಯವನ್ನು (ನಮ್ಮ ಸಮಾಜದಲ್ಲಿ ಇದು ಕೇವಲ ಹುಡುಗ– ಹುಡುಗಿಯ ಭವಿಷ್ಯವಲ್ಲ, ಇಡೀ ಕುಟುಂಬದ ಹಾಗೂ ಸಮಾಜದ ಭವಿಷ್ಯ) ನಿರ್ಧರಿಸುವ ವಿವಾಹದ ನಿರ್ಧಾರ ತೀರ ಬಾಲಿಶವಾಗುತ್ತಿರುವುದು ವಿಷಾದದ ಸಂಗತಿ.

ಈ ನಿಟ್ಟಿನಲ್ಲಿ ಯುವ ಜನರಿಗೆ ತಿಳುವಳಿಕೆ ನೀಡಲು ಕೌನ್ಸಿಲಿಂಗ್ ಅಗತ್ಯವಿದೆ. ಸಲಹೆ– ಸಮಾಲೋಚನೆಗಳ ಬಗ್ಗೆ ಶಾಲಾ ಕಾಲೇಜುಗಳು ಪ್ರಯತ್ನ ನಡೆಸಬೇಕು. ಹುಚ್ಚು ಪ್ರೇಮದಲ್ಲಿ ಸಿಕ್ಕಿ, ಜೀವನದಲ್ಲಿ ಯಾವುದೇ ಗೊತ್ತು–ಗುರಿಯಿಲ್ಲದ ಪಡ್ಡೆ ಹುಡುಗರ ಟೈಮ್‌ಪಾಸ್ ಪ್ರೇಮಜಾಲದಲ್ಲಿ ನಲುಗುವ ಎಳೆಯ ಹುಡುಗಿಯರಿಗೆ ಸರಿಯಾದ ತಿಳುವಳಿಕೆ ನೀಡುವ ಕೆಲಸ ಶಾಲಾ–ಕಾಲೇಜುಗಳಲ್ಲಿ ನಡೆಯಬೇಕು.

ಪ್ರೇಮದ ಶಕ್ತಿ ಅಗಾಧವಾದದ್ದು. ಹಿಂದು–ಮುಂದು ವಿಚಾರಿಸದೇ, ಆ ಹದಿಹರೆಯದವರ ಆರ್ಥಿಕ ಸ್ಥಿತಿ–ಗತಿಯನ್ನು ಲೆಕ್ಕಿಸದೇ ಪ್ರೇಮ ವಿವಾಹಕ್ಕೆ ಪೌರೋಹಿತ್ಯ ವಹಿಸುವ ಸಮಾಜ ಸೇವಕರ ಸಂಖ್ಯೆ ಕೂಡ ಇತ್ತೀಚೆಗೆ ಬೆಳೆಯುತ್ತಿದೆ. ಈ ಸಮಾಜ ಸೇವಕರ ಪೌರೋಹಿತ್ಯದಲ್ಲಿ ನಡೆದ ವಿವಾಹದ ಬಂಧನದಿಂದ ಹುಡುಗ ಪಲಾಯನ ಮಾಡಿ, ಹುಡುಗಿ ನಿರ್ಗತಿಕಳಾದರೆ ಯಾರು ಹೊಣೆ ಎನ್ನುವ ತರ್ಕಕ್ಕೆ ಯಾರ ಬಳಿಯೂ ಉತ್ತರವಿಲ್ಲ. ಇನ್ನು ವಿಪರೀತದಲ್ಲಿ ಯೋಚಿಸುವುದಾದರೆ ಹುಡುಗ ಊರು ಬಿಟ್ಟು ಪರವೂರನ್ನು ಸೇರಿ ಹುಡುಗಿಯನ್ನು ವೇಶ್ಯಾವಾಟಿಕೆಗೆ ತಳ್ಳಿದರೆ ಯಾರು ಗತಿ?

ಈ ಹಿನ್ನೆಲೆಯಲ್ಲೇ ಹದಿಹರೆಯದವರ ಸಮಸ್ಯೆಗಳನ್ನು ಆಲಿಸಿ ಸಮಾಲೋಚನೆ ನಡೆಸುವ ತಜ್ಞರ ಕೌನ್ಸಿಲಿಂಗ್ ಅಗತ್ಯವಿದೆ. ಮನೋಶಾಸ್ತ್ರಜ್ಞರ, ವೈದ್ಯರ ಸಲಹೆ ಪಡೆದು ಯುವಜನರಿಗೆ ಸಲಹೆ– ಸಮಾಲೋಚನೆ ನೀಡುವ ಪ್ರಯತ್ನವನ್ನು ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಮಾಜ ಸೇವಾ ಸಂಘ–ಸಂಸ್ಥೆಗಳು ಮಾಡಬೇಕು. ದಿನನಿತ್ಯ ಟಿ.ವಿಗಳಲ್ಲಿ ಭಗ್ನಪ್ರೇಮದ ಕಥಾನಕಗಳು, ಪ್ರೇಮಿಗಳ ಕೊಲೆಯ, ಶೋಷಣೆಯ ಪ್ರೇಮ ಪ್ರಕರಣದ ಹೊಸ, ಹೊಸ ಕಥೆ ಕೇಳಿ ಬರುತ್ತಿರುವ ನಮ್ಮಲ್ಲಿ ಇದರ ಅಗತ್ಯವಂತೂ ತುಂಬಾ ಇದೆ.

■ ಸಿ.ಎಸ್. ಕೋಡಿ